ಪ್ರಮುಖ ಕಾರಣಗಳು.

- ಸೈಬರ್ ಅಪರಾಧಗಳನ್ನು ಹೆಚ್ಚಾಗಿ ಎಸಗುವವರು ಯಾರು?

ತಾಂತ್ರಿಕ ನೈಪುಣ್ಯತೆಯನ್ನು ಹೊಂದಿರುವ ಉತ್ತರ ಭಾರತದ ಮೂಲದವರು.

ಸೈಬರ್ ಅಪರಾಧಗಳ ತಡೆಗೆ ಪೊಲೀಸ್ ಇಲಾಖೆ ಕೈಗೊಂಡ ಕ್ರಮಗಳೇನು? ಯಾವ ರೀತಿಯ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲಾಗಿದೆ?

ಜಾಹೀರಾತು ಹಾಗೂ ಸೂಚನಾ ಪತ್ರಗಳ ಮೂಲಕ ಹಾಗೂ ಪೊಲೀಸ್ ವೆಬ್‌ಸೈಟ್ ಮೂಲಕ ಸೈಬರ್ ಅಪರಾಧಗಳ ಬಗ್ಗೆ ಅರಿವು ಮೂಡಿಸಲಾಗುತ್ತಿದೆ. ಅಂತರರಾಜ್ಯ ಸೈಬರ್ ಕಳ್ಳರ ಮಾಹಿತಿಯನ್ನು ಏಕೀಕೃತ ಪೋರ್ಟಲ್‌ಗೆ ಅಪ್‌ಲೋಡ್ ಮಾಡಿ ಮಾಹಿತಿಯನ್ನು ಪಡೆಯಲಾಗುತ್ತಿದೆ. ಸೈಬರ್ ದೂರುಗಳನ್ನು ಆನ್‌ಲೈನ್ ಮೂಲಕ ಪಡೆದುಕೊಳ್ಳಲಾಗುತ್ತಿದೆ.

- ಸೈಬರ್ ಅಪರಾಧಗಳ ಬಗ್ಗೆ ಪೊಲೀಸರನ್ನು ಹೇಗೆ ಸಜ್ಜುಗೊಳಿಸಲಾಗುತ್ತಿದೆ?

ಸೈಬರ್ ಅಪರಾಧಗಳ ಬಗ್ಗೆ ಬೆಂಗಳೂರು ಸಿಐಡಿ ಘಟಕದಿಂದ ನುರಿತ ತಜ್ಞರಿಂದ ಕಾಲಕಾಲಕ್ಕೆ ತರಬೇತಿಯನ್ನು ನೀಡಲಾಗುತ್ತಿದೆ. ಸೈಬರ್ ಅಪರಾಧಗಳ ತನಿಖೆ ಸಂಬಂಧ ದೆಹಲಿ, ಹೈದರಾಬಾದ್‌ಗಳಲ್ಲಿ ತರಬೇತಿಯನ್ನು ನೀಡಲಾಗುತ್ತಿದೆ.

- ಸೈಬರ್ ವಂಚನೆಗೆ ಒಳಗಾಗುವ ಸಾರ್ವಜನಿಕರು ಪ್ರಾಥಮಿಕವಾಗಿ ಏನು ಮಾಡಬೇಕು?

ಘಟನೆ ಜರುಗಿದ ತಕ್ಷಣ ಸಂಬಂದಪಟ್ಟ ಬ್ಯಾಂಕ್ ಹಾಗೂ ಹತ್ತಿರದ ಪೊಲೀಸ್ ಠಾಣೆಯನ್ನು ಸಂಪರ್ಕಿಸಬೇಕು.

- ಬ್ಯಾಂಕ್ ಖಾತೆಯಿಂದಲೇ ವಂಚಕರು ಹಣ ವರ್ಗಾಯಿಸಿಕೊಳ್ಳುತ್ತಿದ್ದಾರಲ್ಲ...

ಬ್ಯಾಂಕ್‌ನಿಂದ ಬರುವ ಎಚ್ಚರಿಕೆಯ ಸಂದೇಶಗಳನ್ನು ಓದಿ ಪಾಲಿಸಬೇಕು. ಬ್ಯಾಂಕ್ ಖಾತೆಯಲ್ಲಿ ಹಣ ವರ್ಗಾವಣೆ ಸಂಬಂಧ ಸಂದೇಶಗಳು ಬರುತ್ತಿರುವುದನ್ನು ಆಗಾಗ್ಗೆ ಪರಿಶೀಲಿಸಬೇಕು. ಒಂದು ವೇಳೆ ಅನುಮಾನಾಸ್ಪದ ಹಣ ವರ್ಗಾವಣೆ ಕಂಡು ಬಂದಲ್ಲಿ ಹತ್ತಿರದ ಪೊಲೀಸ್ ಠಾಣೆಗೆ ಮಾಹಿತಿ ನೀಡಬೇಕು.

- ಸೈಬರ್ ಅಪರಾಧ ತಡೆಗೆ ನಿಮ್ಮ ಸಲಹೆ ಏನು?

ಯಾರಿಗೂ ನಿಮ್ಮ ಎಟಿಎಂ ಕಾರ್ಡ್ ಮಾಹಿತಿ ಹಾಗೂ ಒಟಿಪಿ ಕೊಡಬೇಡಿ. ಒಎಲ್‌ಎಕ್ಸ್, ಕ್ವಿಕರ್‌ನಂತಹ ಆನ್‌ಲೈನ್ ಶಾಪಿಂಗ್‌ನಲ್ಲಿ ಕಡಿಮೆ ಹಣಕ್ಕೆ ವಾಹನವನ್ನು ಮಾರಾಟ ಮಾಡುವುದಾಗಿ ಮೋಸ ಮಾಡುತ್ತಾರೆ.ಸೈನಿಕರಂತೆ ಪೋಟೋವಿರುವ ಐಡಿ ಕಾರ್ಡ್‌ನ್ನು ಕಳುಹಿಸಿ ನಂಬಿಸಿ, ತುರ್ತಾಗಿ ಮುಂಗಡ ಹಣವನ್ನು ಪಾವತಿ ಮಾಡಲು ಹೇಳುತ್ತಾರೆ. ವಾಹನವು ಏರ್‌ಪೋರ್ಟ್‌ನಲ್ಲಿದೆ, ಹಣ ಪಾವತಿ ಮಾಡಿ ವಾಹನವನ್ನು ಪಡೆಯಲು ಹೇಳಿ ಹಣಪಾವತಿಸಿಕೊಂಡು ಮೋಸಮಾಡುತ್ತಾರೆ, ಎಚ್ಚರ.



ದೂರು ದಾಖಲಾಗುವ ಪ್ರಮಾಣ ಅತ್ಯಂತ ಕಡಿಮೆ. ಹೀಗಾಗಿ ದೇಶದಲ್ಲಿ ಇಂತಹ ಸೈಬರ್ ಅಪರಾಧ ಕೃತ್ಯಗಳನ್ನು ನಿಯಂತ್ರಿಸಲು ಸಾಧ್ಯವಾಗುತ್ತಿಲ್ಲ.

ಜನರ ವೈಯಕ್ತಿಕ ವಿವರಗಳನ್ನು ಕಲೆಹಾಕಲು ಅಥವಾ ಅವರ ಸಾಮಾಜಿಕ ಜಾಲತಾಣದ ಖಾತೆಗೆ ಕನ್ನ ಹಾಕಲು ಆನ್‌ಲೈನ್ ಗೇಮ್‌ಗಳನ್ನು, ಭವಿಷ್ಯ ಹೇಳುವ ಅಪ್ಲಿಕೇಷನ್‌ಗಳನ್ನು ಬಳಸಿಕೊಳ್ಳಲಾಗುತ್ತದೆ. ಇಂಥ ಗೇಮ್ ಮತ್ತು ಅಪ್ಲಿಕೇಷನ್‌ಗಳ ಲಿಂಕ್ ಇರುವ ಪೋಸ್ಟ್‌ಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಡಲಾಗುತ್ತದೆ. ಆ ಲಿಂಕ್‌ಗಳನ್ನು ಬಳಸಿದವರ ಮತ್ತು ಅವರ ಸ್ನೇಹಿತರ ಸಂಪೂರ್ಣ ವಿವರ ವಂಚಕರಿಗೆ ಲಭ್ಯವಾಗುತ್ತದೆ. ಈ ರೀತಿ ವಿವರ ಕಳವು ಮಾಡುವುದನ್ನು 'ಐಡೆಂಟಿಟಿ ಥೆಫ್ಟ್' ಎಂದು ಪರಿಗಣಿಸಲಾಗುತ್ತದೆ.

ಸಾಮಾಜಿಕ ಅಭಿಪ್ರಾಯ ರೂಪಿಸುವ ಸಲುವಾಗಿ ನಕಲಿ ಖಾತೆಗಳನ್ನು ಸೃಷ್ಟಿಸುವುದು, ಆ ಖಾತೆಗಳ ಮೂಲಕ ಸುಳ್ಳುಸುದ್ದಿ ಹರಡುವಂತಹ ಪ್ರಕರಣಗಳು ಭಾರತದಲ್ಲಿ ಹೆಚ್ಚು ವರದಿಯಾಗಿವೆ. ಬಾಲಿವುಡ್ ನಟ ಸುಶಾಂತ್ ಸಿಂಗ್ ರಜಪೂತ್ ಸಾವಿನ ಪ್ರಕರಣದಲ್ಲಿ ಮುಂಬೈ ಪೊಲೀಸರ ವಿರುದ್ಧ ಅಭಿಪ್ರಾಯ ರೂಪಿಸಲು ಟ್ವಿಟರ್‌ನಲ್ಲಿ 80 ಸಾವಿರಕ್ಕೂ ಹೆಚ್ಚು ನಕಲಿ ಖಾತೆಗಳನ್ನು ಸೃಷ್ಟಿಸಲಾಗಿತ್ತು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಇವೆಲ್ಲವೂ ಮಾಹಿತಿ ತಂತ್ರಜ್ಞಾನ ಕಾಯ್ದೆ ಅಡಿ ಗಂಭೀರ ಅಪರಾಧ ಕೃತ್ಯಗಳಾಗಿವೆ.

## ಸಶಸ್ತ್ರವಿಲ್ಲದ ಹೋರಾಟ

ನಿತ್ಯವೂ ಅಪ್‌ಡೇಟ್ ಆಗುತ್ತಿರುವ ಸೈಬರ್ ವಂಚಕರನ್ನು ಹೆಡೆಮುರಿ ಕಟ್ಟಲು ಸೈಬರ್ ಕ್ರೈಂ ಹಾಗೂ ಸೆನ್ (ಸೈಬರ್ ಅಪರಾಧ, ಆರ್ಥಿಕ ಹಾಗೂ ಮಾದಕ ವಸ್ತು) ಠಾಣೆ ಪೊಲೀಸರದ್ದು ಸುಸಜ್ಜಿತ ಶಸ್ತ್ರಾಸ್ತ್ರವಿಲ್ಲದ ಸಮರದಂತಾಗಿದೆ.

'ತಂತ್ರಜ್ಞಾನ ಬದಲಾದಂತೆ ಸೈಬರ್ ಕ್ರೈಂ ಸ್ವರೂಪಗಳು ಬದಲಾಗುತ್ತಿವೆ. ಸಾಫ್ಟ್‌ವೇರ್‌ಗಳು ಅಪ್‌ಡೇಟ್ ಆಗುತ್ತಿವೆ. ಆದರೆ, ತನಿಖಾ ಕ್ರಮ ಹಾಗೂ ಕಾನೂನು ಮಾತ್ರ ಬದಲಾಗುತ್ತಿಲ್ಲ. ಹೀಗಾಗಿ, ಗಡಿ ಮಿತಿಯಿಲ್ಲದ ಸೈಬರ್ ಅಪರಾಧಗಳನ್ನು ಪತ್ತೆ ಮಾಡುವುದು ತೀರಾ ಕಷ್ಟ' ಎಂದು ಅಧಿಕಾರಿಯೊಬ್ಬರು ತಮ್ಮ ಅಸಹಾಯಕತೆಯನ್ನು ತೋಡಿಕೊಳ್ಳುತ್ತಾರೆ.

ರಾಜ್ಯದಲ್ಲಿ ಪ್ರತಿ ದಿನ ಸೈಬರ್ ವಂಚನೆಯ ಹಲವು ಪ್ರಕರಣಗಳು ದಾಖಲಾಗುತ್ತಿವೆ. ಈ ಸೈಬರ್ ಪ್ರಕರಣಗಳನ್ನು ಠಾಣೆಯ ಇನ್‌ಸ್ಪೆಕ್ಟರ್‌ಗಳೇ ನಿರ್ವಹಿಸಬೇಕಾಗಿದೆ. ಬಂದೋಬಸ್ತ್ ಹಾಗೂ ಇನ್ನಿತರ ಅಪರಾಧ ಚಟುವಟಿಕೆಗಳಿಗೆ ಕಡಿವಾಣ ಹಾಕುವ ಕೆಲಸದಲ್ಲಿರುವ ಪೊಲೀಸರಿಗಿಂತ ಅಪ್ಪಟ ತಂತ್ರಜ್ಞಾನ ಆಧಾರಿತ ಪ್ರಕರಣಗಳ ತನಿಖೆಗೆ ವಿಶೇಷ ವಿಭಾಗವಿದ್ದರೆ ಉತ್ತಮ ಎನ್ನುವುದು ಹಲವರ ಅಭಿಪ್ರಾಯ.

'ಸೈಬರ್ ವಂಚಕರ ವಿರುದ್ಧ ನಮ್ಮ ಪೊಲೀಸರು ಕಠಿಣ ಕ್ರಮ ಕೈಗೊಳ್ಳುತ್ತಾರೆ' ಎಂದು ರಾಜ್ಯ ಸರ್ಕಾರ ಹೇಳುತ್ತಿದೆ. ಆದರೆ, ಸೆನ್ ಠಾಣೆಗಳಲ್ಲಿನ ವಾಸ್ತವ ಸ್ಥಿತಿಯೇ ಬೇರೆ ಇದೆ. ತರಬೇತಿ ಹಾಗೂ ನಿರ್ದಿಷ್ಟ ಉಪಕರಣ ನೀಡಿದರಷ್ಟೇ ಸಾಲದು, ಅದಕ್ಕೆ ತಕ್ಕಂತೆ ಕಾನೂನು ತಿದ್ದುಪಡಿ ಮಾಡಬೇಕು. ಪ್ರತಿಯೊಬ್ಬರಿಗೂ ಕೆಲಸ ಹಂಚಿಕೆ ಮಾಡಬೇಕು' ಎನ್ನುವುದು ಇಲ್ಲಿನ ಸಿಬ್ಬಂದಿಯ ಮಾತು

## ಹೇಗೆ ಎಚ್ಚರ ವಹಿಸಬೇಕು?

- ಸುರಕ್ಷತೆಯ ಮೊದಲನೇ ಸೂತ್ರವೇ, ಯಾರಿಗೂ ಒಟಿಪಿ ಕೊಡಬಾರದು ಎನ್ನುವುದು. ಮನೆಯ